ದಿಃ 05-06-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಎನ್.ಎನ್.ಎಂ. ರವರಿಂದಃ-**

(ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ ಎಂದು ವಕೀಲರು ಹೇಳಿದ ಕಾರಣ ಮರಾಠಿ ಭಾಷೆ ಮತ್ತು ಕನ್ನಡ ಭಾಷೆ ತಿಳಿದಿದೆ ಎಂದು ಹೇಳಿರುವ ವಕೀಲರಾದ ಶ್ರೀಮತಿ ಎ .ಎಂ.ಬಿ. ರವರನ್ನು ತರ್ಜುಮೆದಾರರಾಗಿ ನೇಮಕ ಮಾಡಿದ್ದು ಸದರಿಯವರು ಪ್ರತಿವಾದಿಯರ ಪರ ವಕೀಲರು ಕನ್ನಡದಲ್ಲಿ ಕೇಳಿದ ಪ್ರಶ್ನೆಗಳನ್ನು ಮರಾಠಿಗೆ ತರ್ಜುಮೆ ಮಾಡಿ ಸಾಕ್ಷಿಗೆ ಹೇಳಲು, ಸಾಕ್ಷಿಯು ಮರಾಠಿಯಲ್ಲಿ ಹೇಳಿದ ಉತ್ತರವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಲು ಒಪ್ಪಿಕೊಂಡಿರುತ್ತಾರೆ . ರೂ.200/- ನ್ನು ತರ್ಜುಮೆದಾರರ ಫೀ ಎಂದು ನಿಗದಿಪಡಿಸಿದ್ದು ವಾದಿಯು ಸದರಿ ಫೀಯನ್ನು ನೀಡಲು ಆದೇಶಿಸಲಾಗಿದೆ.)

ನಾನು ಸಲ್ಲಿಸಿರುವ ಹೆಚ್ಚುವರಿ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳ ಬಗ್ಗೆ ಮಾಹಿತಿ ಇಲ್ಲ. ನಮ್ಮ ವಕೀಲರು ಸಹಿ ಮಾಡಲು ಹೇಳಿದ ಮೇರೆಗೆ ನಾನು ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣ ಪತ್ರವು ಇಂಗ್ಲೀಷ್ ನಲ್ಲಿ ಇರುವುದರಿಂದ ಅದರಲ್ಲಿ ಏನು ಬರೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಾನು ವಕೀಲರಿಗೆ ಮಾಹಿತಿಯನ್ನು ನೀಡಿರುವುದಿಲ್ಲ ಎಂದರೆ ಸಾಕ್ಷಿಯು ನಾನೇ ಮಾಹಿತಿಯನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಮ್ಮ ತಂದೆಯವರಿಗೆ ಎಷ್ಟು ಜನ ಸಹೋದರರು ಎಂದರೆ ಸಾಕ್ಷಿಯು 4 ಜನ ಎಂದು ನುಡಿಯುತ್ತಾರೆ. ಸದರಿ ಎಲ್ಲಾ 4 ಜನ ಸಹೋದರರು ಜೀವಂತ ಇರುತ್ತಾರೆಯೇ ಎಂದರೆ ಸಾಕ್ಷಿಯು ಮೃತರಾಗಿರುತ್ತಾರೆ ಎಂದು ನುಡಿಯುತ್ತಾರೆ.

**2.** ದಾವೆಯನ್ನು ಯಾವ ಉದ್ದೇಶಕ್ಕಾಗಿ ದಾಖಲಿಸಲಾಗಿದೆ ಎಂದರೆ ಸಾಕ್ಷಿಯು ವಿಭಾಗ ಕೋರಿ ದಾಖಲಿಸಲಾಗಿದೆ ಎಂದು ನುಡಿಯುತ್ತಾರೆ. ಈ ಮೊದಲು ವಿಭಾಗವಾಗಿಲ್ಲವೆಂದು ದಾವೆಯನ್ನು ವಿಭಾಗಕ್ಕಾಗಿ ದಾಖಲಿಸಿರುತ್ತೀರಿ ಎಂದರೆ ಸರಿ. ನಾನು ಮತ್ತು 2 ಹಾಗೂ 3 ನೇ

ವಾದಿಯರು ಸೇರಿಕೊಂಡು ದಾವೆಯನ್ನು ದಾಖಲಿಸಿರುತ್ತೇವೆ. ವಾದಿಯರನ್ನು ಹೊರತುಪಡಿಸಿ ವಾದಿಯರಿಗೆ ಬೇರೆ ಸಹೋದರರು ಇರುತ್ತಾರೆಯೇ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಎಲ್ಲಾ ಸಹೋದರರ ಹೆಸರು ಪಹಣಿಯಲ್ಲಿ ದಾಖಲಾಗಿರುವುದಿಲ್ಲ. ದಾವಾ ಆಸ್ತಿಯ ಸರ್ವೆ ನಂ.222. ದಾವಾ ಆಸ್ತಿಯ ವಿಸ್ತೀರ್ಣ 28 ಗುಂಟೆ ಇರುತ್ತದೆ. ದಾವಾ ಆಸ್ತಿಯ ಪಹಣಿಯಲ್ಲಿ ಯಾರ ಹೆಸರು ದಾಖಲಾಗಿರುತ್ತದೆ ಎಂದರೆ ಸಾಕ್ಷಿಯು ಕೃಷ್ಣ ದಾಕಲು ಕರ್ಲೇಕರ್, ನಾರಾಯಣ ಯಶವಂತ ಕರ್ಲೇಕರ್, ಲಕ್ಮಣ್ ಮಹದೇವ ಕರ್ಲೇಕರ್, ದಿವಾಕರ್ ಈಶ್ವರ ಕರ್ಲೇಕರ್, ಶೆಟ್ಟು ರಾಮ ಕರ್ಲೇಕರ್ ಎಂದು ನುಡಿಯುತ್ತಾರೆ. ಸದರಿಯವರು ಹೆಸರುಗಳು ಒಂದೇ ಉತಾರದಲ್ಲಿ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಚೆಕ್ಕುಬಂಧಿ ನನಗೆ ಹೇಳಲು ಬರುತ್ತದೆ, ಪೂರ್ವಕ್ಕೆ ನಮ್ಮದೇ ಆಸ್ತಿ, ಪಶ್ಚಿಮಕ್ಕೆ ಈಶ್ವರ ಗುಂಡು ಕರ್ಲೇಕರ್ ರವರ ಆಸ್ತಿ, ಉತ್ತರಕ್ಕೆ ಶೆಟ್ಟು ರಾಮ ಕಾರ್ಲೇಕರ್ ರವರ ಆಸ್ತಿ ಅಂದರೆ ಪ್ರತಿವಾದಿಗಳ ಆಸ್ತಿ, ದಕ್ಷಿಣಕ್ಕೆ ಕೃಷ್ಣ ದಾಕಲು ಕರ್ಲೇಕರ್ ರವರ ಆಸ್ತಿ.

**3.** ನಾವು ಈ ಮೊದಲು ಆಸ್ತಿಯನ್ನು ಅಳತೆ ಮಾಡಿಸಲು ಎಪಿಎಲ್/ಪೋಡಿ ಎಸ್.ಆರ್.ಸಂಖ್ಯೆ 102/2008-09 ರಂತೆ ಪ್ರಕರಣವು ಇತ್ತು ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸದರಿ ಪ್ರಕರಣವು ರಿಮಾಂಡ್ ಆಗಿ ಪುನಃ ಅಳತೆ ಮಾಡಲು ಆದೇಶವಾಗಿತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಡಿಡಿಎಲ್ಆರ್ ರವರು ಎಡಿಎಲ್ಆರ್ ರವರಿಗೆ ಪೋಡಿ ಮಾಡುವ ಕುರಿತು ಇನ್ನೂ ಚಾಲ್ತಿ ಹಂತದಲ್ಲಿ ಇದೆಯೇ ಎಂದರೆ ನನಗೆ ಗೊತ್ತಿಲ್ಲ. ಎಡಿಎಲ್ಆರ್ ರವರಲ್ಲಿ ಪ್ರಕರಣವು ಚಾಲ್ತಿಯಲ್ಲಿ ಇಲ್ಲದೆ ಇದ್ದರೂ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.222 ರ

ಆಸ್ತಿಯು ಶೆಟ್ಟುಪ್ಪ ಕರ್ಲೇಕರ್ ರವರ ಹೆಸರಿನಲ್ಲಿ 5 ಗುಂಟೆ ಆಸ್ತಿಯು ಇರುತ್ತದೆ ಎಂದರೆ ಸಾಕ್ಷಿಯು ಇರುವುದಿಲ್ಲ ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**